**ಸಿ.ಸಿ.ಸಂ.344/19**
**PW-1**

**<u>ದಿನಾಂಕಃ29.12.2025ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.</u>**

**<u>ಪಾಟೀ ಸವಾಲು ಪಿರ್ಯಾದುದಾರರ ಪರ ಶ್ರೀ. ಸಿ.ಎಂ.ಕೆ., ವಕೀಲರಿಂದಃ-</u>**

ದಿಃ04.05.2018ನೇ ತಾರೀಖಿಗೆ ತಮ್ಮ ಬಳಿ 3 ಲಕ್ಷ ಹಣ ಇತ್ತು ಎಂದು ತೋರಿಸಲು ಏನಾದರೂ ದಾಖಲೆಗಳು ಇದೆಯಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಆರೋಪಿತನಿಗೆ 3 ಲಕ್ಷ ಹಣವನ್ನು ಸಾಲ ಕೊಟ್ಟಿರುತ್ತೇನೆ ಎಂದು ತಮ್ಮ ಪಿರ್ಯಾದಲ್ಲಿ ಹೇಳಿದ್ದು, ಯಾರಾದರೂ ಸಾಕ್ಷಿದಾರರ ಸಮಕ್ಷಮ ಹಣ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಸಾಕ್ಷಿದಾರರು ಯಾರೂ ಇರಲಿಲ್ಲ ಎಂದು ನುಡಿದು ತದನಂತರ ನನ್ನ ತಾಯಿ ಇದ್ದರು ಎಂದು ನುಡಿಯುತ್ತಾರೆ. ನನ್ನ ತಾಯಿಯ ಹೆಸರು ಹೇಮಾವತಿ ಎಂದರೆ ಸರಿ. ನನ್ನ ತಾಯಿ ಸರ್ಕಾರಿ ನಿವೃತ್ತ ಶಿಕ್ಷಕಿ ಎಂದರೆ ಸರಿ. ನನಗೆ ಕನ್ನಡ ಮತ್ತು ಇಂಗ್ಲೀಷ್ ಓದಲು ಮತ್ತು ಬರೆಯಲು ಬರುತ್ತದೆ ಎಂದರೆ ಸರಿ. ಆರೋಪಿತನಿಗೆ ಸಾಲ ಕೊಟ್ಟೆ ಎಂದು ಹೇಳಿದ ದಿನವೇ ಈ ಕೇಸಿನ ವಿವಾದಿತ ಚೆಕ್ಕನ್ನು ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಸಾಲದ ವ್ಯವಹಾರ ಏನಾದರೂ ಬರವಣಿಗೆ ರೂಪದಲ್ಲಿ ಮಾಡಿಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಆರೋಪಿತನಿಗೆ ಸಾಲ ಕೊಟ್ಟಿದ್ದೆ ಎಂದು ಹೇಳಲು ಯಾವುದೇ ದಾಖಲೆ ಇಲ್ಲ ಎಂದರೆ ಸಾಕ್ಷಿ ಚೆಕ್ಕನ್ನು ಹೊರತುಪಡಿಸಿ ಬೇರೆ ದಾಖಲೆ ಇಲ್ಲ ಎನ್ನುತ್ತಾರೆ. ತಾವು 3 ಲಕ್ಷ ಹಣವನ್ನು ಹೊಂದಿಸಿದ ಬಗ್ಗೆ ದಾಖಲಾತಿ ಇದೆಯಾ ಎಂದರೆ ಸಾಕ್ಷಿ ನಾನು ಅಂಗಡಿ ನಡೆಸುತ್ತಿದ್ದೆ, ಅಂಗಡಿ ಮುಚ್ಚಿ ನನ್ನ ವ್ಯವಹಾರಕ್ಕೆ ಇಟ್ಟುಕೊಂಡಿದ್ದೆ, ಆರೋಪಿಗೆ ಸಾಲವಾಗಿ ಕೊಟ್ಟಿದ್ದೆ ಎನ್ನುತ್ತಾರೆ. ಅಂಗಡಿಯ ವ್ಯವಹಾರವನ್ನು ಕರೆಂಟ್ ಅಕೌಂಟ್ ಮೂಲಕ ವ್ಯವಹರಿಸುತ್ತಿದ್ದೆ ಎಂದರೆ ಸಾಕ್ಷಿ ನಾನು ಸಣ್ಣ ಅಂಗಡಿ ಇಟ್ಟುಕೊಂಡಿದ್ದೆ ಹಾಗಾಗಿ ಯಾವುದೇ ಕರೆಂಟ್ ಅಕೌಂಟ್ ಇಟ್ಟುಕೊಳ್ಳದೇ ಕೈ ವ್ಯವಹಾರ ಮಾಡುತ್ತಿದ್ದೆ ಎನ್ನುತ್ತಾರೆ. ನಾನು ಚನ್ನಪಟ್ಟಣ

ಶಾಖೆಯ ಸಿಂಡಿಕೇಟ್ ಬ್ಯಾಂಕಿನಲ್ಲಿ ಕರೆಂಟ್ ಅಕೌಂಟ್ ಹೊಂದಿದ್ದೆ ಎಂದರೆ ಸರಿ. ತಾವು ಅಂಗಡಿ ವ್ಯವಹಾರ ನಿಲ್ಲಿಸಿದ್ದೆ ಎಂದು ಹೇಳಿದ್ದು ನಿಲ್ಲಿಸಿದ ನಂತರ ಸಿಂಡಿಕೇಟ್ ಬ್ಯಾಂಕಿನಲ್ಲಿ ತಾವು ಹೊಂದಿದ್ದ ಕರೆಂಟ್ ಅಕೌಂಟ್ ನ್ನು ಮುಕ್ತಾಯಗೊಳಿಸಿದ್ದರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ತಾವು ಅಂಗಡಿ ನಡೆಸುತ್ತಿದ್ದೆ ಎಂದು ಹೇಳಿದ್ದು ಅಂಗಡಿಯನ್ನು ಮುಚ್ಚಿದಾಗ ಸಿಂಡಿಕೇಟ್ ಬ್ಯಾಂಕಿನಲ್ಲಿ ತಮ್ಮ ಖಾತೆಯಲ್ಲಿ ಎಷ್ಟು ಹಣ ಇತ್ತು ಎಂದರೆ ಸಾಕ್ಷಿ ಆ ಕಾಲಕ್ಕೆ 5-6 ಸಾವಿರ ಹಣ ಖಾತೆಯಲ್ಲಿತ್ತು ಎನ್ನುತ್ತಾರೆ. ದಿಃ04.05.2018ಕ್ಕೆ ಆರೋಪಿಗೆ 3 ಲಕ್ಷ ಹಣ ಸಾಲವಾಗಿ ಕೊಟ್ಟಿದ್ದೆ ಎಂದು ಹೇಳಿದ ಎಷ್ಟು ದಿನದ ಮೊದಲು ಅಂಗಡಿ ವ್ಯವಹಾರವನ್ನು ನಿಲ್ಲಿಸಿದ್ದೀರಿ ಎಂದು ಕೇಳಲಾಗಿ ಸಾಕ್ಷಿ 2-3 ತಿಂಗಳು ಮುಂಚೆ ಎಂದು ನುಡಿಯುತ್ತಾರೆ. ಅಂಗಡಿಯನ್ನು ಏಕೆ ಮುಚ್ಚಿದ್ದಿರಿ ಎಂದು ಕೇಳಲಾಗಿ ಸಾಕ್ಷಿ ಅಂಗಡಿಯಲ್ಲಿ ವ್ಯಾಪಾರ ಆಗುತ್ತಿರಲಿಲ್ಲ, ಲಾಸ್ ಆಗುತ್ತಿತ್ತು, ಹಾಗಾಗಿ ಕೈಯ್ಯಲ್ಲಿ ಇರುವುದನ್ನು ಕಳೆದುಕೊಳ್ಳುವುದು ಬೇಡ ಎಂದು ಅಂಗಡಿಯನ್ನು ಮುಚ್ಚಿರುತ್ತೇನೆ ಎಂದು ಹೇಳುತ್ತಾರೆ. ಯಾವ ಕಾರಣಕ್ಕೆ ಅಂಗಡಿಯನ್ನು ಮುಚ್ಚಿರುತ್ತೀರಿ ಎಂದು ಕೇಳಲಾಗಿ ಸಾಕ್ಷಿ, ತಿಂಗಳಿಗೆ 20-25 ಸಾವಿರ ಮೇಲೆ ಬರುತ್ತಿತ್ತು, ಹಾಗಾಗಿ ಅಂಗಡಿ ಮುಚ್ಚಿದ್ದೇನೆ ಎನ್ನುತ್ತಾರೆ. ತಾವು ಬಟ್ಟೆ ಅಂಗಡಿಯನ್ನು ಇಟ್ಟುಕೊಂಡಿದ್ದು ಅದನ್ನು ಮುಚ್ಚಿರುತ್ತೇನೆ ಎಂದು ತಾವು ಹೇಳಿದ್ದು, ಮುಚ್ಚುವ ಕಾಲಕ್ಕೆ ಅಂಗಡಿಯಲ್ಲಿದ್ದ ಬಟ್ಟೆಗಳನ್ನು ಬೇರೆಯವರಿಗೆ ಮಾರಾಟ ಮಾಡಬೇಕು ಎಂದರೆ ಸರಿ. ಸಾಕ್ಷಿ ಮುಂದುವರಿದು ಬಟ್ಟೆಗಳನ್ನು ಮಾರಾಟ ಮಾಡಿ ಬಂದ ಹಣವನ್ನು ಆರೋಪಿತನಿಗೆ ಸಾಲವಾಗಿ ಕೊಟ್ಟಿದ್ದೆ ಎನ್ನುತ್ತಾರೆ. 2018ನೇ ಸಾಲಿನಲ್ಲಿ ಜಿಎಸ್‌ಟಿ ಚಾಲ್ತಿಯಲ್ಲಿತ್ತು ಎಂದರೆ ಸರಿ. ತಾವು ಅಂಗಡಿಯನ್ನು ಮುಚ್ಚುವ ಸಮಯದಲ್ಲಿ ಉಳಿದಿದ್ದ ಬಟ್ಟೆಗಳನ್ನು ಬೇರೆಯವರಿಗೆ ಮಾರಾಟ ಮಾಡಬೇಕಾದರೆ ಜಿಎಸ್‌ಟಿ ಬಿಲ್ಲಿನೊಂದಿಗೆ ಮಾರಾಟ ಮಾಡಬೇಕು ಎಂದರೆ ಸರಿ. ತಮ್ಮ ಅಂಗಡಿಯಲ್ಲಿ ಉಳಿದಿದ್ದ ಬಟ್ಟೆಳನ್ನು

ಯಾರಿಗೆ ಮಾರಾಟ ಮಾಡಿದ್ದೀರಿ ಎಂದು ಕೇಳಲಾಗಿ ಸಾಕ್ಷಿ ನಾಗೇಶ ಎಂಬುವವರಿಗೆ ಮಾರಾಟ ಮಾಡಿದ್ದೆ ಆತ ಈಗ ತೀರಿಕೊಂಡಿದ್ದಾನೆ ಎಂದು ನುಡಿದು, 2 ಲಕ್ಷ ಅಧಿಕ ಬೆಲೆಗೆ ಆತನಿಗೆ ಉಳಿದ ಬಟ್ಟೆಗಳನ್ನು ಮಾರಾಟ ಮಾಡಿದ್ದೆ ಎಂದು ನುಡಿಯುತ್ತಾರೆ. ನಾನು ಬಟ್ಟೆಗಳನ್ನು ಮಾರಾಟ ಮಾಡಿ ಬಂದ ಹಣದಲ್ಲಿ ಜಿಎಸ್‌ಟಿ ಹಣವನ್ನು ಕಟ್ಟಬೇಕು ಎಂದರೆ ಸರಿ. ನಾನು ಬಟ್ಟೆ ಅಂಗಡಿಯ ಹಣಕಾಸಿನ ವ್ಯವಹಾರದಲ್ಲಿ ಲಾಸ್ ಆಗಿ ಅಂಗಡಿಯನ್ನು ಮುಚ್ಚಿದ್ದೆ ಎಂದರೆ ಸರಿ. ಬಟ್ಟೆ ಅಂಗಡಿಯನ್ನು ಮುಚ್ಚುವ ಕಾಲಕ್ಕೆ ಅಂಗಡಿಯಲ್ಲಿ ಯಾವುದೇ ಬಟ್ಟೆ ಉಳಿದಿರಲಿಲ್ಲ ಮತ್ತು ಯಾರಿಗೂ ಉಳಿಕೆ ಬಟ್ಟೆಯನ್ನು ಮಾರಾಟ ಮಾಡಿಲ್ಲ ಎಂದರೆ ಸರಿಯಲ್ಲ.

2. ಆರೋಪಿ ಪರ ವಕೀಲರು ಸಾಕ್ಷಿಗೆ ಆರೋಪಿಗೆ ಸೇರಿದ ಆಧಾರ್ ಕಾರ್ಡನ್ನು ತೋರಿಸಿ ಆಧಾರ್ ಕಾರ್ಡಿನಲ್ಲಿ ಆರೋಪಿಯ ತಂದೆಯ ಹೆಸರು ರಾಮಸ್ವಾಮಿ ಎಂದು ನಮೂದಾಗಿದೆ ಎಂದು ತೋರಿಸಿ ಕೇಳಲಾಗಿ ಸಾಕ್ಷಿ ಹೌದು ಎಂದು ಒಪ್ಪಿದ ಮೇರೆಗೆ ಆರೋಪಿಗೆ ಸೇರಿದ ಆಧಾರ್ ಕಾರ್ಡನ್ನು ನಿ.ಡಿ.1 ಎಂದು ಗುರುತಿಸಲಾಯಿತು. ನಾನು ಹಾಜರುಮಾಡಿರುವ ಪಿರ್ಯಾದಲ್ಲಿ ಮತ್ತು ನೋಟೀಸಲ್ಲಿ ಆರೋಪಿಯ ತಂದೆಯ ಹೆಸರು ರಾಮಸ್ವಾಮಿ ಎಂದು ನಮೂದಾಗಿಲ್ಲ ಎಂದರೆ ಸಾಕ್ಷಿ ಗ್ರಾಮದಲ್ಲಿ ಆರೋಪಿಯ ತಂದೆಯ ಹೆಸರನ್ನು ರಾಮಸ್ವಾಮಿ ಎಂಬುದರ ಬದಲು ಕುಳ್ಳಪ್ಪ ಎಂಬ ಹೆಸರಿನಿಂದ ಕರೆಯುತ್ತಾರೆ, ಹಾಗಾಗಿ ಆತನ ತಂದೆಯ ಹೆಸರನ್ನು ಕುಳ್ಳಪ್ಪ ಎಂದು ಪಿರ್ಯಾದಲ್ಲಿ ಮತ್ತು ನೋಟೀಸಲ್ಲಿ ನಮೂದಿಸಿರುತ್ತೇನೆ ಎನ್ನುತ್ತಾರೆ. ನಿ.ಪಿ.1 ಚೆಕ್ಕಿನಲ್ಲಿ ನಾರಾಯಣ ಎಂ ಆರ್ ಎಂದು ಹೆಸರು ಬರೆದಿದ್ದು, ತಮ್ಮ ನೋಟೀಸಲ್ಲಿ ಮತ್ತು ಪಿರ್ಯಾದಲ್ಲಿ ಆರೋಪಿಯ ಇನಿಷಿಯಲ್ ಎಂ ಆರ್ ಎಂದು ಬರೆದಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಆರೋಪಿಯ ಪರಿಚಯ ನನಗೆ ಇಲ್ಲದೇ ಇರುವುದರಿಂದ ಆರೋಪಿತನ ಇನಿಷಿಯಲ್ ಮತ್ತು ಆರೋಪಿಯ ತಂದೆಯ

ಹೆಸರನ್ನು ತಪ್ಪಾಗಿ ನಮೂದಿಸಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಆರೋಪಿ ನನಗೆ ಚಿಕ್ಕಂದಿನಿಂದಲೂ ಪರಿಚಯ ಎನ್ನುತ್ತಾರೆ.

3. ನನ್ನ ತಾಯಿಯ ತವರೂರು ಮತ್ತು ಆರೋಪಿಯ ಊರು ಮೈಲನಾಯಕನಹಳ್ಳಿ ಗ್ರಾಮ ಎಂದರೆ ಸರಿ. ಆರೋಪಿ ಮತ್ತು ನನ್ನ ತಾಯಿ ಒಂದೇ ಗ್ರಾಮದವರು ಇದ್ದು ಆರೋಪಿಯು 2015ನೇ ಇಸವಿಯಲ್ಲಿ ನನ್ನ ತಾಯಿಯಿಂದ 20 ಸಾವಿರ ಹಣವನ್ನು ಸಾಲವಾಗಿ ಪಡೆದುಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ನನ್ನ ತಾಯಿಗೆ ಕೊಡಬೇಕಾಗಿದ್ದ 20 ಸಾವಿರ ಹಣದ ಭದ್ರತೆಗಾಗಿ ಈ ಕೇಸಿನ ವಿವಾದಿತ ಚೆಕ್ಕನ್ನು ಆರೋಪಿಯು ನನ್ನ ತಾಯಿಗೆ ನೀಡಿದ್ದ ಎಂದರೆ ಸರಿಯಲ್ಲ. ನನ್ನ ತಾಯಿಗೆ ಕೊಡಬೇಕಾಗಿದ್ದ 20 ಸಾವಿರ ಹಣವನ್ನು 2016ರಲ್ಲಿ ಆರೋಪಿಯು ನನ್ನ ತಾಯಿಗೆ ಮರುಪಾವತಿ ಮಾಡಿರುತ್ತಾನೆ ಎಂದರೆ ಸಾಕ್ಷಿ, ಅವರ ವ್ಯವಹಾರಗಳು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಆರೋಪಿಯು ನನ್ನ ತಾಯಿಗೆ ಕೊಡಬೇಕಾಗಿದ್ದ ಹಣವನ್ನು ಕೊಟ್ಟಿದ್ದರೂ ಈ ಕೇಸಿನ ವಿವಾದಿತ ಚೆಕ್ಕನ್ನು ವಾಪಸ್ಸು ಆರೋಪಿಗೆ ಕೊಡದೇ ಎಲ್ಲೋ ಇಟ್ಟಿದ್ದೇನೆ ನಂತರ ಕೊಡುತ್ತೇನೆ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಾಯಿ ಶಿಕ್ಷಕಿ ಆಗಿದ್ದರಿಂದ ಅವರನ್ನು ನಂಬಿ ಈ ವಿವಾದಿತ ಚೆಕ್ಕು ಸಿಕ್ಕಿದಾಗ ವಾಪಸ್ಸು ನನಗೆ ಕೊಡುತ್ತಾರೆ ಎಂದು ಕೇಸನ್ನು ದಾಖಲು ಮಾಡುವವರೆಗೂ ಸುಮ್ಮನೆ ಇದ್ದ ಎಂದರೆ ಸರಿಯಲ್ಲ. ಆರೋಪಿಯು 20 ಸಾವಿರ ಹಣದ ಭದ್ರತೆಗಾಗಿ ಈ ವಿವಾದಿತ ಚೆಕ್ಕನ್ನು ನನ್ನ ತಾಯಿ ನೀಡಿದ್ದು ಸದರಿ ಚೆಕ್ಕು ಖಾಲಿ ಚೆಕ್ಕು ಎಂಬುದನ್ನು ದುರ್ಬಳಕೆ ಮಾಡಿಕೊಂಡು ನಾನು ಆರೋಪಿಯ ವಿರುದ್ಧ 3 ಲಕ್ಷ ಹಣವನ್ನು ಭರ್ತಿ ಮಾಡಿ ಸುಳ್ಳು ಕೇಸು ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ಈ ಕೇಸನ್ನು ದಾಖಲು ಮಾಡುವ ಪೂರ್ವದಲ್ಲಿ ಆರೋಪಿತನಿಗೆ ಯಾವುದೇ ನೋಟೀಸನ್ನು ನೀಡಿಲ್ಲ ಎಂದರೆ ಸರಿಯಲ್ಲ. ನಿ.ಪಿ.1ರಲ್ಲಿರುವ ಆರೋಪಿಯ ಸಹಿಗೂ ಮತ್ತು ನಿ.ಪಿ.6ರಲ್ಲಿ

ಇರುವ ನಾರಾಯಣ ಎಂಬ ಹೆಸರಿನ ಸಹಿಗೂ ವ್ಯತ್ಯಾಸ ಇದೆ ಎಂದರೆ ಸರಿ. ನಿ.ಪಿ.6ರಲ್ಲಿರುವ ಸಹಿ ಆರೋಪಿಯದ್ದು ಅಲ್ಲ ಎಂದರೆ ನನಗೆ ಗೊತ್ತಿಲ್ಲ. ಆರೋಪಿಯ ತಂದೆಯ ಹೆಸರನ್ನು ತಪ್ಪಾಗಿ ಮತ್ತು ಆರೋಪಿತನ ಇನಿಷಿಯಲ್ ನಮೂದು ಮಾಡದೇ ಇರುವುದರಿಂದ ಆರೋಪಿತನಿಗೆ ತಾವು ಕಳುಹಿಸಿದ್ದ ನೋಟೀಸ್ ತಲುಪಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ಬದುಕಿದ್ದಾರೆ ಎಂದರೆ ಸರಿ. ಆರೋಪಿತನಿಗೆ ತಾವು 3 ಲಕ್ಷ ಹಣವನ್ನು ಸಾಲವಾಗಿ ಕೊಟ್ಟಿದ್ದೆ ಎಂದು ಹೇಳಿದ್ದು ಬಡ್ಡಿಗಾಗಿ ಸಾಲ ಕೊಟ್ಟಿದ್ದರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಾನೇ ಹಣಕಾಸಿನ ವ್ಯವಹಾರದಲ್ಲಿ ಲಾಸ್ ಆಗಿದ್ದು, ಬಟ್ಟೆ ಅಂಗಡಿಯನ್ನು ಮುಚ್ಚಿದ್ದು ಆರೋಪಿತನಿಗೆ 3 ಲಕ್ಷ ಹಣವನ್ನು ಬಡ್ಡಿರಹಿತ ಕೊಡುವ ಸಾಮರ್ಥ್ಯ ಇರಲಿಲ್ಲ ಎಂದರೆ ಸರಿಯಲ್ಲ.

4. ನಾಗರಾಜು ಎಂಬುವವರು ತಾವು ಬಟ್ಟೆ ಅಂಗಡಿ ಮುಚ್ಚುವ ಕಾಲಕ್ಕೆ ಉಳಿದ ಬಟ್ಟೆಗಳ್ನು ಖರೀದಿ ಮಾಡಿದ್ದರು ಎಂದು ಹೇಳಿದ್ದು ಅವರು ಯಾವ ಹೆಸರಿನಲ್ಲಿ ಬಟ್ಟೆ ಅಂಗಡಿ ತೆರೆದಿದ್ದರು ಎಂದು ಹೇಳಿದ್ದೀರಾ ಎಂದರೆ ಸಾಕ್ಷಿ ಅವರು ಯಾವ ಹೆಸರು ಮತ್ತು ಯಾವ ಸ್ಥಳದಲ್ಲಿ ಬಟ್ಟೆ ಅಂಗಡಿ ತೆರೆದಿದ್ದರು ಎಂದು ಗೊತ್ತಿಲ್ಲ ಆದರೆ ನಾನು ಬಟ್ಟೆ ಅಂಗಡಿ ತೆರೆಯುತ್ತೇನೆ ಎಂದು ನನ್ನ ಹತ್ತಿರ ಬಟ್ಟೆಗಳನ್ನು ಖರೀದಿ ಮಾಡಿದ್ದರು ಎಂದು ನುಡಿಯುತ್ತಾರೆ. ನಾಗರಾಜುರವರು ಯಾವ ಗ್ರಾಮದವರು ಎಂದರೆ ಗುಡ್ಡೆತಿಮ್ಮಸಂದ್ರ ಗ್ರಾಮದವರು ಎಂದು ನುಡಿದು ನನ್ನ ಸ್ನೇಹಿತರೊಬ್ಬರು ನಾಗರಾಜುರವರನ್ನು ನನಗೆ ಪರಿಚಯ ಮಾಡಿಕೊಟ್ಟಿದ್ದರು ಎಂದು ನುಡಿಯುತ್ತಾರೆ. ನಾಗರಾಜು ಎಂಬುವವರಿಗೆ ತಮ್ಮ ಬಟ್ಟೆ ಅಂಗಡಿ ಮುಚ್ಚುವ ಕಾಲಕ್ಕೆ ಉಳಿದ ಬಟ್ಟೆಗಳನ್ನು 2 ಲಕ್ಷ ರೂಗೂ ಅಧಿಕ ಮಾರಾಟ ಮಾಡಿದ್ದೆ ಎಂದು ತಾವು ಈ ಮೇಲೆ ಹೇಳಿದ್ದು ಸದರಿ ಹಣವನ್ನು ಯಾವ ಮೂಲಕ ಪಡೆದುಕೊಂಡಿದ್ದೀರಾ ಎಂದು ಕೇಳಲಾಗಿ ಸಾಕ್ಷಿ ನಗದು ಮೂಲಕ ಎನ್ನುತ್ತಾರೆ. ಬಟ್ಟೆ

ವ್ಯಾಪಾರದಲ್ಲಿ ಜಿಎಸ್‌ಟಿ ಮತ್ತು ಸಿಎಸ್‌ಟಿ ಎರಡೂ ಸೇರಿ 18% ಇತ್ತು ಎಂದರೆ ನನಗೆ ಗೊತ್ತಿಲ್ಲ. 2 ಲಕ್ಷ ರೂ ಅಧಿಕ ಹಣಕ್ಕೆ ಕನಿಷ್ಟ ಪಕ್ಷ 40 ಸಾವಿರ ಜಿಎಸ್‌ಟಿ ಮತ್ತು ಸಿಎಸ್‌ಟಿ ಹಣ ಕಟ್ಟಬೇಕಿತ್ತು ಎಂದರೆ ಸರಿಯಲ್ಲ. ಬಟ್ಟೆ ಟ್ಯಾಕ್ಸ್ ಕಟ್ಟಿದ ಬಗ್ಗೆ ದಾಖಲೆ ಇದೆಯಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಆರೋಪಿತನಿಂದ ಅಕ್ರಮವಾಗಿ ಹಣ ವಸೂಲಿ ಮಾಡುವ ಉದ್ದೇಶದಿಂದ ನನ್ನ ತಾಯಿಗೆ ಆರೋಪಿ ಕೊಟ್ಟಿದ್ದ ಖಾಲಿ ಚೆಕ್ಕನ್ನು ನಾನು ಪಡೆದು ಆತನ ವಿರುದ್ಧ ಸುಳ್ಳು ಕೇಸು ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು ನನಗೆ 3 ಲಕ್ಷ ಹಣವನ್ನು ಕೊಡುವ ಹೊಣೆಗಾರಿಕೆ ಯಾವ ರೀತಿಯಿಂದಲೂ ಹೊಂದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ.